(ಈ ಹಂತದಲ್ಲಿ ಸದಸ್ಯರುಗಳು ಆಡಿದ ಮಾತುಗಳನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ದಾಖಲು ಮಾಡಿಕೊಳ್ಳಲಿಲ್ಲ.)

ಗಮನ ಸೆಳೆಯುವ ಸೂಚನೆ.

ವಿಷಯ : ಮೂಡಿಗೆರೆ ಕ್ಷೇತ್ರದ ಹಲವಾರು ಸ್ಥಳಗಳಲ್ಲಿ ಕುಡಿಯುವ ನೀರಿನ ಅಭಾವದಿಂದ ಜನರಿಗೆ ತೊಂದರೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ಕ್ಷೇತ್ರದ ಹಲವಾರು ಸ್ಥಳಗಳಲ್ಲಿ ಕುಡಿಯುವ ನೀರಿನ ಅಭಾವದಿಂದ ಜನರು ತೊಂದರೆಗೀಡಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭೀವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

* ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) - (ಗ್ರಾಮಿಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ,

1. ಮೂಡಿಗೆರೆ ತಾಲ್ಲೂಕಿನಲ್ಲಿ ಒಟ್ಟು 32 ಕೊಳವೆ ನೀರು ಸರಬರಾಜು ಯೋಜನೆ, 21 ಕಿರು ನೀರು ಸರಬರಾಜು ಯೋಜನೆ ಹಾಗೂ 650 ಕೊಳವೆ ಬಾವಿಗಳು ಕಾರ್ಯ ನಿರ್ವಹಿಸುತ್ತಿದ್ದು ಬೇಸಿಗೆಯಲ್ಲಿ ಸುಮಾರು 250 ಕೊಳವೆ ಬಾವಿಗಳಲ್ಲಿ ನೀರಿನ ಕೊರತೆ ಉಂಟಾಗುವ ಸಂಭವವಿರುತ್ತದೆ.
2. ಈ ಕೆಳಕಂಡ ನಾಲ್ಕು ಗ್ರಾಮಗಳಲ್ಲಿ ನೀರು ಸರಬರಾಜು ಯೋಜನೆಗಳ ಜಲ ಮೂಲದಲ್ಲಿ ನೀರು ಇಳುವರಿ ಕಡಿಮೆಯಾಗಿದ್ದು ಇನ್ನು ಮುಂದೆ ಬೇಸಿಗೆಯಲ್ಲಿ ನೀರಿನ ತೊಂದರೆ ಆಗುವ ಸಂಭವ ಇರುತ್ತದೆ.
   1. ಬೆಳಗೊಳ, 2. ಮಗ್ಗಲಮಕ್ಕಿ, 3. ಬಾಪೂಜಿನಗರ 4. ಬಣಕಲ್.
   ಈಗ್ರಾಮದಲ್ಲಿ ನೀರು ಸರಬರಾಜು ಯೋಜನೆಯನ್ನು ಉತ್ತಮಗೊಳಿಸಲು ನದಿ ದಂಡೆಯಲ್ಲಿ ತೆರೆದ ಬಾವಿಗಳನ್ನು ತೆಗೆದು ಹೆಚ್ಚಿನ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
3. ಇದೇ ರೀತಿ ಮೂಡಿಗೆರೆ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ನೀರಿನ ಸರಬರಾಜು ಯೋಜನೆಯನ್ನು ಸಮರ್ಪಕವಾಗಿ ಹೊಸದಾಗಿ ಬೇರೆ ಜಲ ಮೂಲದಲ್ಲಿ ಸ್ಥಾಪಿಸಿ ಶಕ್ತಿ ರೇಚಕ ನೀರೆತ್ತುವ ಕೊಳವೆ ಮಾರ್ಗಗಳ ಮೂಲಕ ಯೋಜನೆಗಳನ್ನು ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

1.	ಹೀರೇಬೈಲು ಗ್ರಾಮ	6.	ಹೊರನಾಡು
2.	ಬಣಕಲ್ ಗ್ರಾಮ	7.	ಉಗ್ಗೇಹಳ್ಳಿ
3.	ಜೆ.ಅಗ್ರಹಾರ	8.	ಪಲ್ಗುಣಿ - ಹೊರಹಟ್ಟಿ
4.	ಕಮ್ಮರಗೋಡು	9.	ಹಳಸೆ- ಕುನ್ನಹಳ್ಳಿ
5.	ಹಳೇಕೆರೆ		

   ಇದಕ್ಕೆ ಬೇಕಾದ ಅನುದಾನವನ್ನು 1993-94 ನೇ ಸಾಲಿನಲ್ಲಿ ಒದಗಿಸಲು ಉದ್ದೇಶಿಸಲಾಗಿದೆ.
4. ಕೊಳವೆ ಬಾವಿ ಮತ್ತು ತೆರೆದ ಬಾವಿಗಳು ಒಣಗಿ ಹೋಗಿ ನೀರಿನ ತೀವ್ರ ಅಭಾವ ಉಂಟಾಗಿರುವ ಪ್ರದೇಶಗಳ ಕೆಲವು ಗ್ರಾಮಗಳಲ್ಲಿ ನೈಸರ್ಗಿಕ ನಿರಂತರ ಯೋಜನೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಕಾಲರ ಪೀಡಿತ ಪ್ರದೇಶಗಳಲ್ಲಿ ವಿಶೇಷ ಅನುಧಾನದ ಅಡಿಯಲ್ಲಿ ಈ ಸಾಲಿನಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ತೆರೆದ

ಬಾವಿಗಳ ಮೂಲಕ ಕಲ್ಪಿಸಲಾಗುವುದು. ಇದಕ್ಕಾಗಿ ವಿಶೇಷ ಅನುದಾನ 10.00 ಲಕ್ಷ ರೂಪಾಯಿಗಳಾಗಿದ್ದು ಇದುವರೆವಿಗೂ 6.00 ಲಕ್ಷಗಳ ಪ್ರಗತಿ ಆಗಿದೆ.

5. ಮೂಡಿಗೆರೆ ತಾಲ್ಲೂಕು ಬೆಟ್ಟಗುಡ್ಡಗಳ ಪ್ರದೇಶವಾಗಿದ್ದು ಕೆಲವು ಹಳ್ಳಿಗಳಿಗೆ ರಿಗ್ ಯಂತ್ರಗಳು ಹೋಗಲು ಸರಿಯಾದ ಸಂಪರ್ಕ ವ್ಯವಸ್ಥೆ ಇಲ್ಲದಿರುವ ಕಾರಣ ಅಲ್ಲಿಯ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಸಾಧ್ಯವಾಗಿಲ್ಲ.

6. ಮೇಲ್ಕಂಡ ಗ್ರಾಮಗಳ ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಅ ನು ಬ ಂ ಧ

1992-93 ನೇ ಸಾಲಿಗೆ ಪೂರ್ಣಗೊಳಿಸಲಿರುವ ನೀರು ಸರಬರಾಜು ಯೋಜನೆಗಳು :

ಮೂಡಿಗೆರೆ ತಾಲ್ಲೂಕು :

1. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ :

1)	ಹಿರೇಬೈಲು ಮಂಡಲ	ಹಿರೇಬೈಲು ಗ್ರಾಮ
2)	ಬಣಕಲ್ ಮಂಡಲ	ಬಣಕಲ ಗಾಮ

2. ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆ :

1)	ಗೋಣಿಬೀಡು ಮಂಡಲ	ಜೆ.ಅಗ್ರಹಾರ
2)	ಗೋಣಿಬೀಡು ಮಂಡಲ	ಕಮ್ಮರಗೋಡು

3. ಕಿರುನೀರು ಸರಬರಾಜು ಯೋಜನೆ :

1)	ದಾರದ ಹಳ್ಳಿ ಮಂಡಲ	ಹಳೇಕೆರೆ
2)	ಸಂಸೆ ಮಂಡಲ	ಹೊರನಾಡು
3)	ಆಂಗಡಿ ಮಂಡಲ	ಉಗ್ಗೆಹಳ್ಳಿ

4. 1992-93 ನೇ ಸಾಲಿನಲ್ಲಿ ನೀರು ಸರಬರಾಜು ಒದಗಿಸುತ್ತಿರುವ ಕೂಡು ಗ್ರಾಮಗಳು :

1)	ಬೆಟ್ಟಗೆರೆ ಮಂಡಲ	ಪಲ್ಗುನಿ - ಹೊರಟ್ಟೆ
2)	ಹಳೇಮೂಡಿಗೆರೆ ಮಂಡಲ	ಹಳಸೆ- ಕುನ್ನಳ್ಳಿ

5. ಕಾಲರ ಪೀಡಿತ ಪ್ರದೇಶಗಳಿಗೆ ವಿಶೇಷ ಅನುದಾನದಡಿಯಲ್ಲಿ ನೀರು ಸರಬರಾಜು ಕಲ್ಪಿಸುತ್ತಿರುವ ಗ್ರಾಮಗಳು :

1)	ಮಾಕೋನಹಳ್ಳಿ ಮಂಡಲ	ಪುರಗ್ರಾಮ
2)	ಗೋಣಿಬೀಡು ಮಂಡಲ	ಉದುಸೆ ದಿನ್ನೆಕೆರೆ
3)	ಹಳೇಮೂಡಿಗೆರೆ ಮಂಡಲ	ಹೆಸಗಲ್ ದಾಕಲ ಹಳ್ಳದಂಗಡಿ
4)	ಆಂಗಡಿ ಮಂಡಲ	ಆಂಜೂರು
5)	ಬನಕಲ್ ಮಂಡಲ	ಬದವದಿನ್ನೆ
6)	ಬೆಟ್ಟಿಗೆರೆ ಮಂಡಲ	ಬಾನಹಳ್ಳಿ
7)	ಬೆಟ್ಟಿಗೆರೆ ಮಂಡಲ	ಕೂಲೂರು
8)	ಹಳೇಮೂಡಿಗೆರೆ ಮಂಡಲ	ಕಾಲೇಮಕ್ಕಿ

6. ಮೂಡಿಗೆರೆ ಕ್ಷೇತ್ರದಲ್ಲಿ ರಿಗ್ ಯಂತ್ರಗಳು ಹೋಗಲು ಅಸಾಧ್ಯವಾಗಿರುವ ಗ್ರಾಮಗಳು:

1. ಮೂಡಿಗೆರೆ ತಾಲ್ಲೂಕು :

1)	ಮಾಕೋನ ಹಳ್ಳಿ ಮಂಡಲ	ಸಂಗಮಪುರ
2)	ಅಂಗಡಿ ಮಂಡಲ	ಕನದೂರು
3)	ಅಂಗಡಿ ಮಂಡಲ	ಹೆಗ್ಗರವಳ್ಳಿ
4)	ದಾರದಹಳ್ಳಿ ಮಂಡಲ	ಬೈರಾಪುರ
5)	ಜಾವಳಿ ಮಂಡಲ	ಹೊರಟ್ಟಿಮನೆ.
6)	ಜಾವಳಿ ಮಂಡಲ	ಹೊಸಳ್ಳಿ
7)	ಬಾಲೂರು ಮಂಡಲ	ಮರಕಲ್

* ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಮಲೆನಾಡು ಭಾಗಗಳಲ್ಲಿ ಕುಡಿಯುವ ನೀರಿನ ವಿಷಯದಲ್ಲಿ ಜನರ ಪರಿಸ್ಥಿತಿ ಹೇಗಿದೆ ಅಂದರೆ - ಸಮುದ್ರಕ್ಕೆ ಒಡೆತನ ಉಪ್ಪಿಗೆ ಬಡತನ ಎನ್ನುವ ಪರಿಸ್ಥಿತಿ ಆಗಿದೆ. ಈಗ ಸಾಕಷ್ಟು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆದಿದ್ದರೂ ಬೋರ್‌ವೆಲ್‌ಗಳು ಡ್ರೈ ಅಪ್ ಆಗಿವೆ. ಸುಮಾರು 880 ಬೋರ್‌ವೆಲ್‌ಗಳು ನನ್ನ ತಾಲ್ಲೂಕಿನಲ್ಲಿದ್ದು ಅದರಲ್ಲಿ 295 ಬೋರ್‌ವೆಲ್‌ಗಳ ಸೋರ್ಸ್ ಡ್ರೈ ಅಪ್ ಆಗಿದೆ. ಹಾಗೆ ಇಲ್ಲಿ ಹೇಳಿರುವ ಪ್ರಕಾರ ಎನ್‌ಆರ್‌ಡಬ್ಲೂ ಸ್ಕೀಮ್ ಏನಿದೆ ಬೆಳಗೊಳ, ಮಗ್ಗಲ್‌ಮಕ್ಕಿ, ಬಾಬುನಗರ, ಬಣಕಲ್ ಮತ್ತು ಗೋಣಿಬಿಡು ಇಲ್ಲಿ ಎನ್‌ಆರ್‌ಡಬ್ಲೂ ಸ್ಕೀಮ್‌ಗೆ ಬೋರ್‌ವೆಲ್ ಸೋರ್ಸ್ ಮಾಡಿದ್ದರು. ಆ ಸೋರ್ಸ್ ಕೂಡ ಡ್ರೈ ಅಪ್ ಆಗಿದೆ. ಈಗ ಅಲ್ಲಿ ಏನು ಮಾಡಬೇಕಾಗಿದೆ, ಅಂದರೆ ಓಪನ್‌ವೆಲ್ ತೆಗೆದು ಅದರ ಮೂಲಕ ಎನ್‌ಆರ್‌ಡಬ್ಲೂ ಸ್ಕೀಮನ್ನು ಚಾಲನೆ ಮಾಡಬೇಕಾಗಿದೆ. ಅದರೆ ಇವತ್ತು ಓಪನ್‌ವೆಲ್ ತೆಗೆಯಲು ಜಿಲ್ಲಾಪರಿಷತ್ತಿಗೆ 50-60 ಲಕ್ಷ ರೂಪಾಯಿ ಬೇಕಾಗುತ್ತದೆ. ಈ ಜಿಲ್ಲಾ ಪರಿಷತ್ತಿನವರ ಹತ್ತಿರ ಇಷ್ಟೊಂದು ಹಣ ಇಲ್ಲ. ಅದಕ್ಕೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ ಮಲೆನಾಡು ಭಾಗಗಳಲ್ಲಿ ನೀವು ಬೋರ್‌ವೆಲ್‌ಗಳನ್ನು ಕೊಡಲೇ ಬೇಡಿ. ಬೋರ್‌ವೆಲ್ ಬದಲಾಗಿ ಅಲ್ಲೇ ನ್ಯಾಚುರಲ್ ವಾಟರ್ ಸಪ್ಲೈ ಏನಿದೆ ಅದಕ್ಕೆ ನೀವು ಟ್ಯಾಂಕ್ ಕಟ್ಟಿ ಪೈಪ್ ಮೂಲಕ ಕುಡಿಯುವ ನೀರಿನ ಯೋಜನೆಯನ್ನು ಮಾಡಲಿಕ್ಕೆ ಹೆಚ್ಚಿನ ಯೋಜನೆಗಳನ್ನು ಜಿಲ್ಲಾಪರಿಷತ್‌ನವರಿಗೆ ಕೊಡಲಿಕ್ಕೆ ಆದೇಶ ಮಾಡಬೇಕಾಗುತ್ತದೆ. ಮಲೆನಾಡು ಎಂದು ಹೇಳಿದರೆ ಮೂಡಿಗೆರೆ ಒಂದೇ ಆಗದೇ ಇರಬಹುದು. ಕೊಡಗು ಜಿಲ್ಲೆಯಲ್ಲಿ ಇದೇ ಪ್ರಶ್ನೆ ಬರುತ್ತದೆ. ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಇದೇ ಪ್ರಶ್ನೆ ಬರುತ್ತದೆ. ಮಂಗಳೂರು ಜಿಲ್ಲೆಗಳಲ್ಲಿಯೂ ಇದೇ ಪ್ರಶ್ನೆ ಬರುತ್ತದೆ. ಅದಕ್ಕೆ ನಮ್ಮಲ್ಲಿ ಸಿಗುವ ಸೋರ್ಸ್ ಏನಿದೆ ಅದಕ್ಕೆ ಟ್ಯಾಂಕ್ ಕಟ್ಟಿ ಪೈಪನ್ನು ಅಳವಡಿಸಿ ಕುಡಿಯುವ ನೀರಿನ ಯೋಜನೆಯನ್ನು ಮಾಡಬೇಕಾಗುತ್ತದೆ. ಒಂದು ಸ್ಕೀಮ್ ಮಾಡಬೇಕಾದರೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಇವರು ಪ್ರತಿಯೊಂದು ಗ್ರಾಮಕ್ಕೆ ಒಂದು ಬೋರ್‌ವೆಲ್ ಎಂದು ಕೊಡುತ್ತಾರೆ. ಬೋರ್‌ವೆಲ್‌ಗೆ 20 ಸಾವಿರ ರೂಪಾಯಿಗಳು ಅದರೆ ಈ ಒಂದು ಸ್ಕೀಮಿಗೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ನಾನು ನಿಮ್ಮ ಮೂಲಕ ಇವತ್ತು ಗ್ರಾಮಾಭಿವೃದ್ಧಿ ಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ ಮಲೆನಾಡು ಭಾಗಗಳಿಗೆ ಅದರಲ್ಲಿಯೂ ಈಗ ಮೂಡಿಗೆರೆ ತಾಲ್ಲೂಕಿನಲ್ಲಿ ಏನು ಸಿವಿಯರ್ ವಾಟರ್ ಸ್ಕೇರ್ ಸಿಟಿ ಇದೆ ಅದಕ್ಕೆ ಸ್ಪೆಷಲ್ಲಾಗಿ ಹಣವನ್ನು ಬಿಡುಗಡೆ ಮಾಡಿ ವಾಟರ್ ಸೋರ್ಸ್ ಡ್ರೈ ಅಪ್ ಆಗಿರುವ ಏರಿಯಾದಲ್ಲಿ ಓಪನ್‌ವೆಲ್‌ನ್ನು ತೆಗೆಯಲಿಕ್ಕೆ ವಿಶೇಷವಾಗಿ ಕ್ರಮ ತೆಗೆದುಕೊಳ್ಳಬೇಕು. ಬೋರ್‌ವೆಲ್ ಬದಲಾಗಿ ಕೆಲವು ಕಡೆ ರಿಗ್ಸ್ ಹಾಕಲಿಕ್ಕೆ ಸಾಧ್ಯವಿಲ್ಲ ಅದನ್ನು ಕೂಡ ಪಟ್ಟಿ ಕೊಟ್ಟಿದ್ದಾರೆ. ಅಂತಹ ಕಡೆ ನಮ್ಮಲ್ಲಿ ಸಿಗುವ

ನ್ಯಾಚುರಲ್ ವಾಟರ್ ಸಪ್ಲೈಗೆ ಟ್ಯಾಂಕ್ ಕಟ್ಟಿ ಪೈಪ್ ಮೂಲಕ ಡ್ರಿಂಕಿಂಗ್ ವಾಟರ್ ಯೋಜನೆ ಮಾಡಲಿಕ್ಕೆ ಇವರು ಹಣವನ್ನು ಬಿಡುಗಡೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಗ್ರಾಮಾಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಸದಸ್ಯರು ಹೇಳಿದ ಹಾಗೆ ಮೂಡಿಗೆರೆಯಲ್ಲಿರತಕ್ಕಂಥ ಸಮಸ್ಯೆ ಮಲೆನಾಡಿನ ಎಲ್ಲಾ ಹಳ್ಳಿಗಳಲ್ಲಿಯೂ ಇದೆ. 400-500 ಅಡಿ ಆಳ ಕೊಳವೆ ಬಾವಿಗಳನ್ನು ತೆಗೆದರೂ ಬೇಸಿಗೆಯಲ್ಲಿ ನೀರು ಬರುವುದಿಲ್ಲ. ವಾಟರ್ ಟೇಬಲ್ ಬಹಳ ಕೆಳಗಡೆ ಹೋಗುತ್ತಿದೆ. ಅದರಿಂದ ಅದಕ್ಕೆ ಬದಲಾಗಿ ಶಾಶ್ವತವಾಗಿ ಹರಿಯುತ್ತಿರತಕ್ಕಂಥ ಹಳ್ಳಕೊಳ್ಳಗಳು ಬಹಳ ಇವೆ. ಅವುಗಳಲ್ಲಿ ನೀರು ಶೇಖರಣೆ ಮಾಡಿ ಈ ಗ್ರಾಮಗಳಿಗೆ ನೀರು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಹಣಕಾಸಿನ ಬಗ್ಗೆ ಮುಖ್ಯಕಾರ್ಯದರ್ಶಿಗಳನ್ನು ಕರೆಯಿಸಿ ಅಲ್ಲಿನ ಅವಶ್ಯಕತೆಗಳನ್ನು ನೋಡಿ, ಮಾಡುತ್ತೇವೆ. ಈಗ ಕೊಟ್ಟಿರುವ ಹಣ ಸಾಲದೇ ಹೋದರೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಸ್ಕೇರ್‌ಸಿಟಿಯಲ್ಲಿ ಡ್ರಿಂಕಿಂಗ್‌ವಾಟರ್‌ಗೆ ಇವರು ಸ್ಪೆಷಲ್ಲಾಗಿ ಹಣವನ್ನು ಬಿಡುಗಡೆ ಮಾಡಿಲ್ಲ. ಏಕೆಂದರೆ ನಮ್ಮ ಜಿಲ್ಲಾಪರಿಷತ್ತಿನಲ್ಲಿ ಹಣ ಇಲ್ಲ. ಮರು ಹೊಂದಾಣಿಕೆಗೆ ಈ ಒಂದು ಇಲಾಖೆ ಏನೊಂದು ಪ್ರಸ್ತಾವನೆ ಕಳಿಸಿ ಅದಕ್ಕೆ ಈವರೆಗೆ ಅನುಮತಿ ನೀಡಿಲ್ಲ. ಆದ್ದರಿಂದ ಎನ್.ಆರ್.ಡಬ್ಲೂ. ಸ್ಕೀಮ್ ಸೋರ್ಸ್ ಡ್ರೈ ಆಪ್ ಆಗಿದೆ. ಅದಕ್ಕೆ ಓಪನ್‌ವೆಲ್ ನಾಲ್ಕು ಕಡೆ ಕೂಡಲೇ ಮಾಡಬೇಕಾಗುತ್ತದೆ. ನಾಲ್ಕು ಕಡೆ ಎಂದರೆ 50,000 / ನಂತೆ ಲೆಕ್ಕ ಹಾಕಿ ಕೂಡಲೇ ಹಣವನ್ನು ಬಿಡುಗಡೆ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

<u>ವಿಷಯ : ಈಜಿಪುರದಲ್ಲಿ ಸುಮಾರು 300 ಗುಡಿಸಲುಗಳು ಅಗ್ನಿಗೆ ಆಹುತಿಯಾಗಿ ಅಲ್ಲಿನ ವಾಸಿಗಳು ನೆಲೆ ಕಳೆದುಕೊಂಡು ತೊಂದರೆಯಾಗಿರುವ ಬಗ್ಗೆ.</u>

ಶ್ರೀ ಎಸ್.ರಮೇಶ್ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಈಜಿಪುರದಲ್ಲಿ 300 ಗುಡಿಸಲುಗಳು ಅಗ್ನಿಗೆ ಆಹುತಿಯಾಗಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) (ಕಂದಾಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, Between the midnight of 27.1.1993 and on the early hours of 28.1.1993, fire broke-out accidentally which gutted as many as 227 huts out of 396 huts situated in Sy. No. 102 to 105 of Kormangala near Ejipura Village, Bangalore South Taluk.

Out of those, 210 huts were fully and 17 huts were partially burnt. It is verified that the affected members of the family are labourers and belong to backward section of the society. However, there were no casualities to the human lives or live stock. The loss suffered by individual affected families is estimated to be ranging from Rs. 2,000/- to Rs. 5,000/-